# ಕರ್ನಾಟಕ ಸರ್ಕಾರ

ಸಂ:ಗ್ರಾಅಪ/19/ಗ.ಕೋಶ/2016

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:01.09.2017

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ
ಬೆಂಗಳೂರು.

ಇವರಿಗೆ:
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತಿ.
ಧಾರವಾಡ.

ಮಾನ್ಯರೇ,

ವಿಷಯ: ಗ್ರಾಮ ಪಂಚಾಯತಿಗಳಲ್ಲಿ ಸ್ಥಾಪಿಸಿರುವ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ವಿತರಿಸಲಾಗುತ್ತಿರುವ ಪಹಣಿ ಪತ್ರಿಕೆಗಳ ಸೇವಾ ಶುಲ್ಕದಲ್ಲಿ ಪಂಚಾಯತ್ ರಾಜ್ ಇಲಾಖೆ ಮತ್ತು ಕಂದಾಯ ಇಲಾಖೆ ಮಧ್ಯೆ ಆದಾಯ ಹಂಚಿಕೆ ಮಾಡಿರುವ ಆದೇಶಕ್ಕೆ ಗ್ರಾಅಪ ಇಲಾಖೆಯ ಸಮ್ಮತಿ ಇಲ್ಲದಿರುವ ಬಗ್ಗೆ.

ಉಲ್ಲೇಖ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಧಾರವಾಡ ಜಿ.ಪಂ. ರವರ ಪತ್ರ ಸಂಖ್ಯೆ:ಧಾಜಿಪಂ/ಆಡಳಿತ/ಸಿ-6/2017-18/1615, ದಿನಾಂಕ:09.08.2017.

******

ಗ್ರಾಮ ಪಂಚಾಯತಿಗಳು ಸ್ವಯಂ ಸ್ಥಳೀಯ ಸರ್ಕಾರವಾಗಿ ರೂಪುಗೊಳ್ಳಲು ಸ್ಥಾಪಿಸಿರುವ ಪಂಚಾಯತ್ 100-ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಗ್ರಾಅಪ ಇಲಾಖೆಯ 43 ಸೇವೆಗಳು, ಕಂದಾಯ ಇಲಾಖೆಯ 40 ಸೇವೆಗಳು ಹಾಗೂ ಇತರೆ 17 ಸೇವೆಗಳನ್ನು ನೀಡಲು ಉದ್ದೇಶಿಸಿರುವುದು ಸರಿಯಷ್ಟೇ.

ಈ ಕೇಂದ್ರಗಳ ಮೂಲಕ ಕಂದಾಯ ಇಲಾಖೆಯ ಸೇವೆಗಳನ್ನು ನೀಡಲು ಗ್ರಾಮ ಪಂಚಾಯತಿಗಳು ತಮ್ಮ ಸಿಬ್ಬಂದಿ ಕಂಪ್ಯೂಟರ್ ಪರಿಕರಗಳು, ಅಂತರ್ಜಾಲ ಸಂಪರ್ಕ, ಕಛೇರಿ ಸೌಲಭ್ಯ ಹಾಗೂ ಇತರೆ ಮೂಲ ಸೌಕರ್ಯಗಳನ್ನು ಬಳಸಿಕೊಳ್ಳಲಾಗುತ್ತಿವೆ. ಪ್ರಸ್ತುತ ಕಂದಾಯ ಇಲಾಖೆಯ ಸೇವೆಗಳು ನಾಡಕಛೇರಿಗಳಿಗಿಂತ ಗ್ರಾಮ ಪಂಚಾಯತಿಗಳ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಉತ್ತಮವಾಗಿ ನಿರ್ವಹಿಸಲ್ಪಡುತ್ತಿವೆ.

ಉಲ್ಲೇಖಿತ ಪತ್ರದಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಪಹಣಿ ಪತ್ರಗಳ ವಿತರಣೆಯಿಂದ ಸಂಗ್ರಹವಾಗುತ್ತಿರುವ ರೂ.10 ಮೊತ್ತದಲ್ಲಿ ಶೇ.75 ರಷ್ಟು (ರೂ.7.50 ಗಳನ್ನು) ಭೂಮಿ ಯೋಜನೆಗೆ ಮತ್ತು ಉಳಿಕೆ ಶೇ.25 (ರೂ.2.50) ಮೊತ್ತವನ್ನು ಗ್ರಾಅಪ ಇಲಾಖೆಗೆ ಹಂಚಿಕೆ ಮಾಡಿ ಆದೇಶಿಸಿದೆ ಎಂದು ತಿಳಿಸಲಾಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸಮ್ಮತಿ ಇರುವುದಿಲ್ಲ.

ಅದರನ್ವಯ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಅಧೀನದ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಿ ಪಹಣಿ ವಿತರಣೆಯಿಂದ ಸಂಗ್ರಹವಾದ ಮೊತ್ತದಲ್ಲಿ ಪ್ರತಿ ಪಹಣಿಗೆ ರೂ.6.50 (ರೂ.7.50-1.00) ಮೊತ್ತವನ್ನು ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಗೆ ಜಮೆ

ಮಾಡುವಂತೆ ಹಾಗೂ ಉಳಿದ ಶೇ.25 (ರೂ. 2.50) ಭಾಗವನ್ನು ಗ್ರಾಮ ಪಂಚಾಯತಿಗಳ ಬಾಪೂಜಿ ಸೇವಾ ಕೇಂದ್ರ ಖಾತೆಗೆ ಜಮೆ ಮಾಡುವಂತೆ ಕ್ರಮಕೈಗೊಳ್ಳಲು ಉಲ್ಲೇಖಿತ ಪತ್ರದಲ್ಲಿ ಸೂಚಿಸಿರುವುದು ಕಂಡುಬಂದಿರುತ್ತದೆ.

ಈಗಾಗಲೇ ತಿಳಿಸಿರುವಂತೆ ಸದರಿ ಆದೇಶಕ್ಕೆ ಗ್ರಾಅಪ ಇಲಾಖೆಯ ಸಮ್ಮತಿ ಪಡೆದಿರುವುದಿಲ್ಲ ಎಂದು ಮಾನ್ಯ ಗ್ರಾಅಪ ಸಚಿವರು ವಿಧಾನ ಪರಿಷತ್ತಿನಲ್ಲಿ ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಉತ್ತರ ನೀಡಿರುತ್ತಾರೆ.

ಹಾಗೂ ಮೈಸೂರಿನಲ್ಲಿ ನಡೆದ ಮಾನ್ಯ ಶಾಸಕರುಗಳು(ವಿಧಾನ ಪರಿಷತ್ತು), ಇವರ ಕಾರ್ಯಾಗಾರದಲ್ಲಿ ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿದ್ದು, ಕಂದಾಯ ಇಲಾಖೆಯ ಸೇವೆಗಳಿಂದ ಸ್ವೀಕೃತವಾಗುವ ಮೊತ್ತವನ್ನು ಗ್ರಾಮ ಪಂಚಾಯತಿಗಳೇ ಸಂಪೂರ್ಣವಾಗಿ ಬಳಸಿಕೊಳ್ಳುವುದು ಸೂಕ್ತ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ತಿಳಿಸಿರುತ್ತಾರೆ. ಸದರಿ ವಿಷಯದಲ್ಲಿ ಸರ್ಕಾರದ ಹಂತದಲ್ಲಿ ಅಂತಿಮ ತೀರ್ಮಾನವಾಗಿರುವುದಿಲ್ಲ.

ಆದುದರಿಂದ ಮುಂದಿನ ಆದೇಶದವರೆಗೆ ತಾವು ನೀಡಿರುವ ಆದೇಶವನ್ನು ಹಿಂಪಡೆಯಲು ತಿಳಿಸಿದೆ.

ತಮ್ಮ ವಿಶ್ವಾಸಿ,

(ಕೆ.ಯಾಲಕ್ಕಿಗೌಡ) 4/5/17
ನಿರ್ದೇಶಕರು (ಇ-ಆಡಳಿತ) (ಪ್ರ) ಹಾಗೂ
ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿ:**

1. ಮಾನ್ಯ ಗ್ರಾಅಪ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.